# ಪಟ್ಟಣ ಪಂಚಾಯಿತಿ ಕಾರ್ಯಾಲಯ,ಸೊರಬ

ನಂ.ಪಪಂಸೊ.ಜೆಇ.ಟೆಂಡರ್.ಸಿಆರ್:14/2008/09 ದಿನಾಂಕ:24-02-2009

:ಅಲ್ಪಾವದಿ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ::

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಪಟ್ಟಣ ಪಂಚಾಯಿತಿ ಎದುರು ಭಾಗದಲ್ಲಿ ಬರುವ ಹಳೇ ಸರ್ಕಾರಿ ಆಸ್ಪತ್ರೆ ಕಟ್ಟಡವನ್ನು ಕೆಡವಿ ಹಾಕಿ ಸಮತಟ್ಟು ಮಾಡುವ ಬಗ್ಗೆ ಕಟ್ಟಡವನ್ನು ಹೇಗಿದೆಯೋ ಹಾಗೆಯೇ ಟೆಂಡರ ಕಂ ಬಹಿರಂಗ ಹರಾಜು ಹಾಕಲಾಗುವುದು. ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು, ದಿನಾಂಕ:11-03-2009ರ ಸಂಜೆ 5-30ಗಂಟೆಯೊಳಗೆ ಠೇವಣಿ ಹಣ ರೂ.1,40,000-00 ಮುಂಗಡವಾಡಿ ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್ ನಿಂದ ಪಡೆದ ಡಿಮಾಂಡ್ ಡ್ರಾಪ್ಟ್ ಅಥವಾ ಈ ಕಛೇರಿಯಲ್ಲಿ ನಗದಾಗಿ ಪಾವತಿಸಿ ಹಾಗೂ ಟೆಂಡರ್ ಫಾರಂ ಬೆಲೆ ರೂ.1000+12.50 % ತೆರಿಗೆ ಬೆಲೆಯನ್ನು ಪಾವತಿಸಿ ಖಾಲಿ ಟೆಂಡರ್ ಫಾರಂನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು. ಹಾಗೂ ಟೆಂಡರ್ ಫಾರಂ ಪಡೆಯದೇ 13-03-2009ರಂದು ನೇರವಾಗಿ ಬಹಿರಂಗ ಹರಾಜಿನಲ್ಲಿ ಬಾಗವಹಿಸುವವರು ಕೂಡಾ ನೋಂದಣಿ ಶುಲ್ಕ 1000+12.50% ತೆರಿಗೆ ಹಾಗೂ ಮುಂಗಡ ಹಣ ರೂ. 1,40,000-00ಗಳಿಗೆ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಸೊರಬರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿಮಾಂಡ್ ಡ್ರಾಪ್ಟ್ ಅಥವಾ ಈ ಕಛೇರಿಗೆ ನಗದಾಗಿ ಪಾವತಿಸಿರುವ ರಶೀದಿಯನ್ನು ಪ್ರತ್ಯೇಕವಾಗಿ ದಿನಾಂಕ:13-03-2009ರ ಬೆಳಿಗ್ಗೆ 10-00 ರಿಂದ 12-00ಘಂಟೆಯೊಳಗೆ ನೀಡಿ ಬಹಿರಂಗ ಹರಾಜಿನಲ್ಲಿ ಬಾಗವಹಿಸಬಹುದು.

| | | |
|---|---|---|
| ಹರಾಜು ದಿನಾಂಕ | : | 13-03-2009 |
| ವೇಳೆ | : | ಮದ್ಯಾಹ್ನ 3-00ಗಂಟೆಯಿಂದ |
| ಸ್ಥಳ | : | ಹಳೇ ಸರ್ಕಾರಿ ಆಸ್ಪತ್ರೆ ಆವರಣ ಸೊರಬ. |

**<u>ನಿಬಂದನೆಗಳು ಮತ್ತು ಷರತ್ತುಗಳು</u>**:

1. ಭರ್ತಿಮಾಡಿದ ಟೆಂಡರುಗಳನ್ನು ಮೋಹರು ಮಾಡಿದ ಲಕೋಟೆಯಲ್ಲಿ ದಿನಾಂಕ:12-03-2009ರಂದು ಸಂಜೆ 4-00ಗಂಟೆಯೊಳಗಾಗಿ ಸ್ವೀಕರಿಸಲಾಗುವುದು.
2. ಟೆಂಡರ್ ಫಾರಂ ಪಡೆಯದೇ ನೇರವಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ದಿನಾಂಕ:13-03-2009ರಂದು ಬೆಳಿಗ್ಗೆ 12-00ಗಂಟೆ ಒಳಗೆ ಮುಂಗಡವಾಗಿ ಇಡುಗಂಟು ಹಣ ರೂ.1,40,000-00 ಮತ್ತು ನೋಂದಣಿ ಶುಲ್ಕ ರೂ:1000+12.50% ತೆರಿಗೆಯನ್ನು ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಸೊರಬರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿಮ್ಯಾಂಡ್ ಡ್ರಾಪ್ಟ್‌ನ್ನು ಈ ಕಛೇರಿಗೆ ನಗದಾಗಿ ಪಾವತಿಸಿದ ರಶೀದಿಯನ್ನು ಪ್ರತ್ಯೇಕವಾಗಿ ನೀಡಬೇಕು. ನೊಂದಣಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
3. ಬಹಿರಂಗ ಹರಾಜು ಪ್ರಕ್ರಿಯೆ ಪೂರ್ಣಗೊಂಡ ನಂತರ ಸ್ವಿಕರಿಸಲಾದ ಟೆಂಡರನ್ನು ತೆರೆಯಲಾಗ

ುವುದು. ಎರಡೂ ಪ್ರಕ್ರಿಯೆಯಲ್ಲಿನ ಅತೀ ಹೆಚ್ಚಿನ ಮೊತ್ತದ ಬಿಡ್‌ನ್ನು ಪರಿಗಣಿಸಲಾಗುವುದು. ಅತೀ ಹೆಚ್ಚಿನ ಮೊತ್ತದ ಬಿಡ್ ದಾರರು ಸ್ಥಳದಲ್ಲೇ ಬಿಡ್ ಮೊತ್ತದ 1/3 ಬಾಗವನ್ನು(ಮುಂಗಡ ಹಣ ಒಳಗೊಂಡಂತೆ)+12.50% ತೆರಿಗೆಯನ್ನು ಡಿ.ಡಿ. ಅಥವಾ ನಗದುರೂಪದಲ್ಲಿ ಪಾವತಿಸಬೇಕು ಪಾವತಿಸಲು ವಿಪಲರಾದಲ್ಲಿ ಅವರ ಮುಂಗಡ ಹಣ ರೂ.1,40,000-00ವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ 2ನೇ ಅತೀ ಹೆಚ್ಚಿನ ಮೊತ್ತದ ಬಿಡ್‌ದಾರರಿಗೆ ಅವಕಾಶ ಮಾಡಿಕೊಡಲಾಗುವುದು.

4. ಬಿಡ್ ಅನುಮೋದನೆ ಆದ ನಂತರ ಬಾಕಿ 2/3 ಮೊತ್ತ+12.50% ತೆರಿಗೆ ಹಣ ಪಾವತಿಸಿ ಕಾರ್ಯಾದೇಶ ಪಡೆದು 30ದಿನದೊಳಗೆ ಕಟ್ಟಡದ ಉಪಯುಕ್ತ ಮತ್ತು ಅನುಪಯುಕ್ತ ಸಾಮಗ್ರಿಗ ಳನ್ನು ಸ್ಥಳಾಂತರಿಸಿ ತೆರವುಗೊಳಿಸಿ ನಿವೇಶನವನ್ನು ಸಮ ತಟ್ಟು ಮಾಡತಕ್ಕದ್ದು. ತಪ್ಪಿದಲ್ಲಿ ಮುಂಗ ಡ ಹಣ ಹಾಗೂ 1/3 ಬಿಡ್ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು.
5. ಟೆಂಡರ್‌ದಾರರು ಬೆಲೆಯನ್ನು ಅಂಕಿಯಲ್ಲಿ ಮತ್ತು ಅಕ್ಷರದಲ್ಲಿಯೂ ಸ್ಪಷ್ಟವಾಗಿ ಬರೆಯತಕ್ಕದ್ದು.
6. ಟೆಂಡರ್ ಆದ ನಂತರ ಬಾಕಿ ಹಣವನ್ನು ಪ್ರಸ್ತಾವನೆಗೆ ಮೇಲಾಧಿಕಾರಿಗಳಿಂದ ಅನುಮೋದನೆ ಆದ ನಂತರ 7 ದಿನಗಳೊಳಗಾಗಿ ಪಾವತಿಸಬೇಕು. ಸದರಿ ವಿಷಯವನ್ನು ಪತ್ರ ಮುಖೇನ ಪ್ರತ್ಯೇಕವಾಗಿ ತಿಳಿಸಲಾಗುವುದು.
7. ಕೆಡವಿದ ನಂತರ ಕಟ್ಟಡಕ್ಕಾಗಿ ಬಳಸಿರುವ ಎಲ್ಲಾ ಸಾಮಗ್ರಿಗಳನ್ನು ಈ ಕಛೇರಿಯ ಕಿರಿಯ ಅಭಿಯಂತರರಿಗೆ ತೋರಿಸಿ ತೆಗೆದುಕೊಂಡು ಹೋಗತಕ್ಕದ್ದು.
8. ಹೆಚ್ಚಿನ ಮಾಹಿತಿ ಹಾಗೂ ವಿವರವನ್ನು ಈ ಕಛೇರಿಯ ಕಿರಿಯ ಅಭಿಯಂತರರಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
9. ಟೆಂಡರ್ ಕಂ ಹರಾಜನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಳ್ಳಾಗಿದೆ.
10. ಕಟ್ಟಡವನ್ನು ಕೆಡುವುವಾಗ ನಿಧಿ ಹಣ ವಗೈರೆ ದೊರೆತಲ್ಲಿ ಸದರಿ ವಿಷಯವನ್ನು ಅಧಿಕಾರಿಗಳ ಗ ಮನಕ್ಕೆ ಕೂಡಲೇ ತರುವುದು.
11. ಟೆಂಡರ್ ಕಂ ಹರಾಜಿನಲ್ಲಿ ಅ ಯಶಸ್ವಿಯಾದ ಬಿಡ್‌ದಾರರಿಗೆ/ಟೆಂಡರ್‌ದಾರರಿಗೆ ಮುಂಗಡ ಹಣವನ್ನು ಹಿಂದಿರುಗಿಸಲಾಗುವುದು. ಟೆಂಡರ್ ಫಾರಂ ಬೆಲೆಯನ್ನು ಹಿಂದಿರುಗಿಸಲಾಗುವುದಿಲ್ಲ.
12. ಅಂಗೀಕೃತ ಬಿಡ್‌ದಾರರು/ಟೆಂಡರ್‌ದಾರರು ಬಿಡ್ ಮೊತ್ತ/ಟೆಂಡರ್ ಮೊತ್ತದ ಮೇಲೆ ನಿಯಮದ ಪ್ರಕಾರ ವಿಧಿಸುವ ತೆರಿಗೆ(ವ್ಯಾಟ್)ಯನ್ನು ಭರಿಸಬೇಕು.
13. ಹರಾಜಿನಲ್ಲಿ ಉದ್ಭವವಾಗುವ ಯಾವುದೇ ವಿವಾದಗಳಿಗೆ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಸೊರಬ ರವರ ತೀರ್ಮಾನವೇ ಅಂತಿಮವಾಗಿರುತ್ತದೆ. ಹಾಗೂ ಈ ತೀರ್ಪಿನ ಮೇಲೆ ಯಾವುದೇ ಮೇಲ್ಮನವಿಯನ್ನು ಮಾನ್ಯ ಮಾಡುವುದಿಲ್ಲ.
14. ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಸೊರಬರವರು ಟೆಂಡರ್ ಕಂ ಬಹಿರಂಗ ಹರಾಜನ್ನು ಯಾವುದೇ ಕಾರಣ ನೀಡದೇ ಮುಂದೂಡಲು ಅಥವಾ ನಿಲ್ಲಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

| | | |
|---|---|---|
| (ಸಹಿ/-) | (ಸಹಿ/-) | (ಸಹಿ/-) |
| ಶ್ರೀ ಮಂಚಿ ಸೋಮಪ್ಪ | ಶ್ರೀಮತಿ ಗೌರಮ್ಮ ಎಸ್ ಭಂಡಾರಿ | (ಶ್ರೀ.ಡಿ.ಡಿ.ಮಾದರ್,) |
| ಅಧ್ಯಕ್ಷರು | ಉಪಾಧ್ಯಕ್ಷರು, | ಮುಖ್ಯಾಧಿಕಾರಿ, |
| ಪಟ್ಟಣ ಪಂಚಾಯಿತಿ,ಸೊರಬ. | ಪಟ್ಟಣ ಪಂಚಾಯಿತಿ,ಸೊರಬ. | ಪಟ್ಟಣ ಪಂಚಾಯಿತಿ,ಸೊರಬ. |